ಗುಲ್ಬರ್ಗಾ-ಬೀದರ್ ರೈಲು ಮಾರ್ಗದ ನಿರ್ಮಾಣ.

3070(3687)

ಶ್ರೀ ಎಂ.ಜಿ.ಮುಳೆ(ಬಸವಕಲ್ಯಾಣ): ಮಾನ್ಯ ಗೃಹ, ಮೂಲ ಸೌಲಭ್ಯ ಅಭಿವೃದ್ಧಿ ಮತ್ತು ನಾಗರೀಕ ವಿಮಾನ ಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರೈಲು ನಿರ್ಮಾಣ ನಿಗಮ ಯಾವಾಗ ಸ್ಥಾಪಿತವಾಯಿತು? ಈ ನಿಗಮದಡಿಯಲ್ಲಿ ಯಾವ ಯಾವ ರೈಲು ಮಾರ್ಗಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ?

ಆ) ಗುಲ್ಬರ್ಗಾ-ಬೀದರ್ ರೈಲು ಮಾರ್ಗವನ್ನು ಕೂಡ ರೈಲು ನಿರ್ಮಾಣ ನಿಗಮಕ್ಕೆ ವಹಿಸಲು ಸರ್ಕಾರ ಉದ್ದೇಶಿಸಿದೆಯೇ? ಉದ್ದೇಶಿಸಿದ್ದರೆ, ಯಾವಾಗ ವಹಿಸಿಕೊಡಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಒಳಾಡಳಿತ, ನಾಗರೀಕ ವಿಮಾನ ಯಾನ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು):

ಅ) ಕರ್ನಾಟಕ ರೈಲ್ವೆ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ(ಕೆ-ರೈಡ್)ವನ್ನು ನವೆಂಬರ್ 2000ದಂದು ಕರ್ನಾಟಕ ಸರ್ಕಾರ ಹಾಗೂ ರೈಲ್ವೆ ಮಂತ್ರಾಲಯದ ನಡುವೆ ಏರ್ಪಟ್ಟ ಒಪ್ಪಂದ ಜ್ಞಾಪನಾ ಪತ್ರದನ್ವಯ ಸೇರಿರುವ ನಿರ್ದಿಷ್ಟ ನಾಲ್ಕು ರೈಲ್ವೆ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸ್ಥಾಪಿಸಲಾಗಿದೆ. ಈ ನಾಲ್ಕು ರೈಲ್ವೆ ಯೋಜನೆಗಳ ಅಂದಾಜು ವೆಚ್ಚವು ರೂ.1640 ಕೋಟಿಗಳಾಗಿದ್ದು ಇವುಗಳೆಂದರೆ:

1. ಹುಬ್ಬಳ್ಳಿ-ಅಂಕೋಲಾ : ಹೊಸ ಮಾರ್ಗ ರಚನೆ
2. ಸೊಲ್ಲಾಪುರ-ಗದಗ : ಗೇಜ್ ಪರಿವರ್ತನೆ
3. ಹಾಸನ-ಮಂಗಳೂರು : ಗೇಜ್ ಪರಿವರ್ತನೆ
4. ಗುಂತಕಲ್-ಹೊಸಪೇಟೆ : ದ್ವಿಮಾರ್ಗ ರಚನೆ

ಆ) ಜ್ಞಾಪನಾ ಪತ್ರದಲ್ಲಿ ಸೇರಿಸಲಾಗಿರುವ ಹಾಗೂ ಈಗಾಗಲೇ ಗುರ್ತಿಸಲಾಗಿರುವ ಯೋಜನೆಗಳನ್ನು ಪೂರ್ಣಗೊಳಿಸಲು ಮೊದ ಆದ್ಯತೆ ನೀಡಲಾಗುವುದು.